# ನಾನಲ್ಲದ ರೂಪವನ್ನು ನಾನು ನೀಡಬೇಕು

ಪದ್ಮಿನಿ
ಝೀ ಕನ್ನಡ
'ಹಿಟ್ಲರ್ ಕಲ್ಯಾಣ'ದ
ಸರಸ್ವತಿ



◆ **ರಂಗಭೂಮಿಯಿಂದ ಕ್ಯಾಮೆರಾ ಎದುರುಗೊಳ್ಳುವ ಸಂದರ್ಭ ಹೇಗಿತ್ತು?**

ನನ್ನ ತಂದೆಯ ಕಾರಣಕ್ಕೆ ಬಾಲ್ಯದಲ್ಲೇ ರಂಗಭೂಮಿಯ ನಂಟು ಬೆಳೆದಿತ್ತು. ನನ್ನ ಅಪ್ಪ ಕಲಾಗಂಗೋತ್ರಿ ಮಂಜು ನಾಟಕ ನಿರ್ದೇಶಕ. ಅವರ ಜೊತೆ ಅನೇಕ ನಾಟಕಗಳನ್ನು ನೋಡಲು ಹೋಗುತ್ತಿದ್ದೆ. ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಾಟಕ–ರೂಪಕಗಳನ್ನು ಮಾಡುತ್ತಿದ್ದೆ. ಕಲಾಗಂಗೋತ್ರಿಯಲ್ಲಿ 'ಮೈಸೂರು ಮಲ್ಲಿಗೆ' ನಾಟಕದಲ್ಲಿ ಪುಟ್ಟ ಪಾತ್ರವನ್ನು ನಿರ್ವಹಿಸಿದೆ. ಅದರ ನಂತರ ನೀನಾಸಂನಲ್ಲಿ ರಂಗ ಶಿಕ್ಷಣ ಪಡೆಯಲೇಬೇಕು ಎನ್ನುವ ಆಸೆ ಮೂಡಿತು. ಅಷ್ಟರಲ್ಲಿ ಡಿಗ್ರಿ ಮುಗಿದಿತ್ತು. ಅದರ ನಂತರ ಎರಡು ನಾಟಕಗಳನ್ನು ನಿರ್ದೇಶನ ಮಾಡಿದೆ. ನಮ್ಮ ತಂದೆಯ ಸಹಕಾರದಿಂದ ಮಕ್ಕಳಿಗಾಗಿ ಎರಡು ರಂಗಭೂಮಿ ಕಾರ್ಯಾಗಾರಗಳನ್ನು ಮಾಡಿದೆ. ರಮೇಶ್ ಇಂದಿರಾ ಸರ್ ಒಮ್ಮೆ ಝೀ ಕನ್ನಡದ 'ಮಹಾದೇವಿ'ಯಲ್ಲಿ ನಟಿಸಲು ಕೇಳಿದರು. ಅದಕ್ಕೂ ಮೊದಲು ಉದಯದ 'ಅಮೃತವಾಹಿನಿ'ಯಲ್ಲಿ ಬಾಲನಟಿಯಾಗಿ ಕಾಣಿಸಿಕೊಂಡಿದ್ದೆ. ಅದರಲ್ಲಿ ಅವರೂ ನಟಿಸಿದ್ದರಿಂದ ಪರಿಚಯ ಇತ್ತು. ಅವರು ಅವಕಾಶವನ್ನು ಮುಂದಿಟ್ಟಾಗ ರಂಗಭೂಮಿಯನ್ನು ಬಿಟ್ಟು ಹೋಗುವ ಮನಸು ಇರಲಿಲ್ಲ. ಮನೆಯಲ್ಲಿ 'ಒಳ್ಳೆಯ ವೇದಿಕೆ ಹೋಗು' ಎಂದು ಪ್ರೋತ್ಸಾಹಿಸಿದ್ದರಿಂದ ಹೋದೆ.

ಮಹಾದೇವಿಯ ನಂತರ ತೆಲುಗು ಟೀವಿಯಲ್ಲೂ ಅವಕಾಶ ಸಿಕ್ಕವು. ನಂತರ ಕನ್ನಡಕ್ಕೆ ಮರಳಿ ಬರಲು ಎರಡು ಮೂರು ಅವಕಾಶ ಸಿಕ್ಕರೂ ಅದಕ್ಕೂ ಸಮಯ ಹೊಂದಾಣಿಕೆ ಆಗಲಿಲ್ಲ. ಅಲ್ಲಿ ಮೂರು ಧಾರಾವಾಹಿ ಮಾಡಿದೆ. ಅಷ್ಟರಲ್ಲಿ ಕೊರೊನಾ ಒಕ್ಕರಿಸಿದ್ದರಿಂದ ಸೀರಿಯಲ್ ಅಕಾಲಿಕವಾಗಿ ಮುಗಿದವು. ಒಂದು ವರ್ಷ ಮನೆಯಲ್ಲೇ ಇದ್ದೆ. 'ಹಿಟ್ಲರ್‌ಗೆ..' ಆಡಿಷನ್‌ಗೆ ಕಾಲ್ ಬಂತು. ಇಲ್ಲಿ ಮೂರನೇ ಸೊಸೆಯ ಪಾತ್ರವನ್ನು ಮಾಡುತ್ತಿದ್ದೇನೆ.

◆ **ನಿರ್ದೇಶನದ ಆಸಕ್ತಿ ಈಗಲೂ ಇದೆಯಾ?**

ನಾನು ಏನೇ ಮಾಡಿದರೂ ಅದು ಶಿಸ್ತುಬದ್ಧವಾಗಿ ಇರಬೇಕು. ಅದನ್ನು ಪೂರ್ತಿಯಾಗಿ ಕಲಿತು ಮಾಡಬೇಕು. ಸಿನಿಮಾ– ಕಿರುತೆರೆಯ ನಿರ್ಮಾಣದ ಬಗ್ಗೆ ಕಲಿಯುತ್ತಿದ್ದೇನೆ. ಈಗ ನಟನೆ ನನ್ನನ್ನು ಮುನ್ನಡೆಸುತ್ತಿದೆ. ನಟನೆ ಎನ್ನುವುದು ನನಗೆ ಪ್ಯಾಶನ್. ಎಲ್ಲ ರೀತಿಯ ಪಾತ್ರಗಳನ್ನು ಮಾಡಬೇಕು ಎನ್ನುವ ಆಸೆ. ನಟನೆಯಲ್ಲಿ ನನ್ನದೇ ಆದ ಪ್ರಯೋಗವನ್ನು ಮಾಡುತ್ತಿದ್ದೇನೆ. ಇದರ ಜೊತೆ ತಂತ್ರಜ್ಞಾನದ ಬಗ್ಗೆ ಕೂಡ ಒಂದು ಕಣ್ಣು ಇಟ್ಟಿದ್ದೇನೆ. ಇದರ ಜೊತೆ ಸ್ಟಾರ್ ಸುವರ್ಣದ 'ಯಡಿಯೂರು ಸಿದ್ಧಲಿಂಗೇಶ್ವರ'ದಲ್ಲಿ ಮೂಗಿಯ ಪಾತ್ರವನ್ನು ಮಾಡುತ್ತಿದ್ದೇನೆ. ಅದು ಕೂಡ ಸವಾಲಿನ ಪಾತ್ರ. ಮುಂದೆ ನಿರ್ದೇಶನವನ್ನು ಮಾಡುತ್ತೇನೆ.

◆ **ಪಾತ್ರ ಎಂದು ಎದುರಾದಾಗ ನಿಮ್ಮ ಆಯ್ಕೆಯ ಮಾನದಂಡ ಏನು?**

ಇಂತಹದ್ದೇ ಪಾತ್ರವನ್ನು ಮಾಡಬೇಕು. ಇದನ್ನು ಮಾಡಬಾರದು ಎನ್ನುವ ಪರಿಕಲ್ಪನೆ ಇಲ್ಲ. ಭಿನ್ನ ಭಿನ್ನ ಛಾಯೆಯ ಪಾತ್ರಗಳನ್ನು ನಿರ್ವಹಿಸಬೇಕು. ಅವು ಪೂರ್ಣ ಅಭಿನಯದ ಮೇಲೆ ನಿಂತಿರಬೇಕು. ಅದು ಯಾವ ರೀತಿಯಲ್ಲೂ ನನ್ನ ಸ್ವಭಾವಕ್ಕೆ ಹೊಂದಿಕೆ ಆಗುವಂತೆ ಇರಬಾರದು. ನಾನಲ್ಲದ ರೂಪವನ್ನು ನಾನು ನೀಡಬೇಕು. ಇಲ್ಲಿಯ ತನಕ ಮಾಡಿದ ಪಾತ್ರಗಳಲ್ಲಿ ಯಾವುದೋ ಒಂದು ಸಣ್ಣ ಎಳೆ ನನ್ನತನಕ್ಕೆ ಹೊಂದಾಣಿಕೆಯಾಗುತ್ತಿರುತ್ತದೆ. ಮನುಷ್ಯನಿಗೆ ಹಲವು ರೀತಿಯ ಭಾವನೆ ಮತ್ತು ನಡವಳಿಕೆಗಳು ಇರುತ್ತವೆ. ಅವುಗಳಲ್ಲಿ ಇದೂ ಒಂದು ಎನ್ನುವಂತೆ ಪಾತ್ರ ಇರಬಾರದು. ಅಂತಹ ಸವಾಲನ್ನು ಪಾತ್ರ ಅಂತರ್ಗತ ಮಾಡಿಕೊಂಡಿರಬೇಕು. ನಾನು ಅನುಭವಿಸಿದೇ ಇರುವ ಪಾತ್ರ ಇರಬೇಕು. ಅದು ಯಾವುದೇ ಗೆಟಪ್ ಅಥವಾ ಗ್ಲಾಮರ್ ಇಲ್ಲದಿರುವ ಪಾತ್ರವನ್ನು ಮಾಡಬೇಕು.

◆ **ಸಂಕೀರ್ಣ ಸಂಗತಿಯನ್ನೂ ಸರಳವಾಗಿ ಗ್ರಹಿಸುವ ಸ್ವಭಾವ ಹೇಗೆ ಬಂತು?**

ಯಾವುದೇ ಸಂಗತಿ ಸಂದರ್ಭವನ್ನು ನಾನು ಬೇಗ ಒಳಗೊಳ್ಳುವುದಿಲ್ಲ. ತಕ್ಷಣ ಎಲ್ಲೂ ಹೊಂದಿಕೊಳ್ಳುವುದಿಲ್ಲ. ನನ್ನದೇ ಸಮಯವನ್ನು ತೆಗೆದುಕೊಳ್ಳುತ್ತೇನೆ. ಹೊಸ ಸ್ಥಳಕ್ಕೆ ಹೋದ ತಕ್ಷಣ ಅದರಲ್ಲಿ ಲೀನವಾಗುವುದಿಲ್ಲ. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ನನಗೆ ಹೇಗೆ ಸರಿ ಹೊಂದುತ್ತದೆ ಎನ್ನುವುದನ್ನು ನೋಡುತ್ತೇನೆ. ಅಲ್ಲಿಯ ವಾತಾವರಣಕ್ಕೆ ಹೇಗೆ ಸ್ಪಂದಿಸಬೇಕು ಎಂದು ಮಾನಸಿಕವಾಗಿ ಸಿದ್ಧಳಾಗುತ್ತೇನೆ. ಅದರ ಬಗ್ಗೆ ನನಗೆ ಖಚಿತತೆ ಬೇಕು. ಎದುರಿಗೆ ಇದ್ದವರು ಹೇಗೆ ತೆಗೆದುಕೊಳ್ಳುತ್ತಾರೆ ಎನ್ನುವುದು ನನಗೆ ಮುಖ್ಯ ಅಲ್ಲ.

◆ **ಸರಸ್ವತಿ ಪಾತ್ರದ ಬಗ್ಗೆ ಹೇಳುವುದಾದರೆ...**

ಕೊರಾನಾ ಕಾರಣಕ್ಕೆ ನನ್ನ ವೃತ್ತಿ ಜೀವನದಲ್ಲಿ ಏಳುಬೀಳುಗಳನ್ನು ನೋಡುವಂತೆ ಆಯಿತು. ಈಗ 'ಹಿಟ್ಲರ್ ಕಲ್ಯಾಣ'ದಲ್ಲಿ ಸರಸ್ವತಿ ಪಾತ್ರ ಮಾಡುತ್ತಿದ್ದೇನೆ. ಹಿಟ್ಲರ್ ಕುಟುಂಬದ ಮೂರನೇ ಸೊಸೆಯ ಪಾತ್ರ ನನ್ನದು. ಆಕೆ ತುಂಬ ಮುಗ್ಧ ಸ್ವಭಾವದವಳು. ಆಕೆಯ ಇಬ್ಬರು ವಾರಗಿತ್ತಿಯರ ಮಾತನ್ನು ಕೇಳಿಕೊಂಡು ಸರಿ ತಪ್ಪು ವಿವೇಚನೆಗಿಂತ ತನಗೆ ಇಷ್ಟ ಆದವರ ಕಡೆ ವಾಲುವ ಕಾಮಿಡಿ ಪಾತ್ರ. ಎರಡು ಮತ್ತು ಮೂರನೇ ಸೊಸೆಯಂದಿರು ಕಿರಿಕಿರಿ ಉಂಟುಮಾಡುತ್ತಾರೆ. ತಮ್ಮ ಮಾವನ ಕಾಟ ತಡೆಯಲು ಅವರಿಗೆ ಮದುವೆ ಮಾಡಿಸಬೇಕು ಎಂದು ಯೋಚಿಸುತ್ತಾರೆ. ಮೊದಲ ಸೊಸೆ ಹಾಗಲ್ಲ. ತನ್ನ ಮಾವ ಹೇಳಿದ್ದೇ ಸರಿ ಎಂಬ ಧೋರಣೆಯವಳು.

■ **ರಾಘವೇಂದ್ರ ಕೆ.**